# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 658 |
| ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21.08.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಸರ್ಕಾರದಿಂದ ಪರವಾನಿಗೆ ಪಡೆದು ಎಷ್ಟು ಕಂಪನಿಗಳು ಗಣಿಗಾರಿಕೆ ಮಾಡುತ್ತಿವೆ: ಅವುಗಳಿಂದ ರಾಜ್ಯದ ಬೊಕ್ಕಸಕ್ಕೆ ಎಷ್ಟು ಆದಾಯ ಬರುತ್ತಿದೆ: (ವಿವರ ನೀಡುವುದು)</td><td>
• ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಮುಖ್ಯ ಖನಿಜ ಗಣಿಗಾರಿಕೆ ಸಂಬಂಧ ಯಾವುದೇ ಗುತ್ತಿಗೆಗಳನ್ನು ಮಂಜೂರು ಮಾಡಿರುವುದಿಲ್ಲ.<br>
• ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994 ರಂತೆ ಉಪಖನಿಜಗಳ ಗಣಿಗಾರಿಕೆಗೆ ಈ ಕೆಳಕಂಡಂತೆ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ.
<table>
<tr><th>ಕ್ರ.ಸಂ</th><th>ಉಪಖನಿಜದ ವಿಧ</th><th>ಗುತ್ತಿಗೆಗಳ ಸಂಖ್ಯೆ</th></tr>
<tr><td>1</td><td>ಕಟ್ಟಡ ಕಲ್ಲು</td><td>122</td></tr>
<tr><td>2</td><td>ಅಲಂಕಾರಿಕ ಶಿಲೆ</td><td>02</td></tr>
<tr><td>3</td><td>ಲ್ಯಾಟರೈಟ್ (ಗ್ರೇಡ್-ಎ)</td><td>27</td></tr>
<tr><td>4</td><td>ಮರಳು</td><td>15</td></tr>
</table>
• ಪಟ್ಟಾ ಜಮೀನುಗಳಲ್ಲಿ ಲ್ಯಾಟರೈಟ್ (ಕೆಂಪುಕಲ್ಲು) ಬ್ರಿಕ್ಸ್ ತೆಗೆಯಲು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2025ರ ನಿಯಮ-3-A(a) ರಂತೆ 114 ಸಂಖ್ಯೆಯ ಕಾರ್ಯಾದೇಶಗಳನ್ನು ಮಂಜೂರು ಮಾಡಲಾಗಿದೆ.<br>
• 2025-26ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪಖನಿಜ ಗಣಿ ಗುತ್ತಿಗೆಗಳಿಂದ ರೂ.63.49 ಕೋಟಿ ಆದಾಯ ಸಂಗ್ರಹವಾಗಿದೆ.
</td></tr>
<tr><td>ಆ)</td><td>ಪರವಾನಿಗೆ ಪಡೆಯದೇ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವ ಕಂಪನಿಗಳೆಷ್ಟು: ಹೊಸದಾಗಿ ಪರವಾನಿಗೆ ಪಡೆಯಲು ಎಷ್ಟು ಅರ್ಜಿಗಳು ಬಂದಿವೆ: (ವಿವರ ನೀಡುವುದು)</td><td>
• ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರವಾನಗಿ ಪಡೆಯದೇ ಅಕ್ರಮ ಗಣಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಅಕ್ರಮ ಎಸಗಿದವರ ವಿರುದ್ಧ ಎಂ.ಎಂ. (ಡಿ & ಆರ್) ಕಾಯ್ದೆ-1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮಗಳಂತೆ ಮೊಕದ್ದಮೆ/ ಖಾಸಗಿ ದೂರುಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ವಿವರಗಳು ಕೆಳಕಂಡಂತಿದೆ:<br>
2025-26 ನೇ ಸಾಲು
<table>
<tr><th>ಉಲ್ಲಂಘನೆ</th><th>ಪತ್ತೆ ಹಚ್ಚಿದ ಪ್ರಕರಣಗಳು</th><th>ದಂಡ (ರೂ.ಲಕ್ಷಗಳಲ್ಲಿ)</th><th>PCR/ FIR</th></tr>
<tr><td>ಗಣಿಗಾರಿಕೆ</td><td>64</td><td>39.46</td><td>20</td></tr>
<tr><td>ಸಾಗಾಣಿಕೆ</td><td>269</td><td>65.54</td><td>1</td></tr>
<tr><td>ದಾಸ್ತಾನು</td><td>31</td><td>61.22</td><td>4</td></tr>
<tr><td>ಒಟ್ಟು</td><td>364</td><td>166.22</td><td>25</td></tr>
</table>
2026-27ನೇ ಸಾಲು
<table>
<tr><th>ಉಲ್ಲಂಘನೆ</th><th>ಪತ್ತೆ ಹಚ್ಚಿದ ಪ್ರಕರಣಗಳು</th><th>ದಂಡ (ರೂ.ಲಕ್ಷಗಳಲ್ಲಿ)</th><th>PCR/ FIR</th></tr>
<tr><td>ಗಣಿಗಾರಿಕೆ</td><td>24</td><td>25.82</td><td>1</td></tr>
<tr><td>ಸಾಗಾಣಿಕೆ</td><td>262</td><td>33.94</td><td>1</td></tr>
<tr><td>ದಾಸ್ತಾನು</td><td>11</td><td>11.07</td><td>0</td></tr>
<tr><td>ಒಟ್ಟು</td><td>297</td><td>70.83</td><td>2</td></tr>
</table>
</td></tr>
</table>

| | | |
|---|---|---|
| | | • ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಟ್ಟಾ ಜಮೀನಿನಲ್ಲಿ ಹೊಸದಾಗಿ ಕಟ್ಟಡ ಕಲ್ಲು ಗಣಿಗಾರಿಕೆಗೆ ಲೈಸೆನ್ಸ್ ಮಂಜೂರಾತಿ ಕೋರಿ **14** ಅರ್ಜಿಗಳು ಸ್ವೀಕೃತವಾಗಿವೆ.<br>• ನದಿ ಪಾತ್ರದಲ್ಲಿ ಮರಳು ಗಣಿಗಾರಿಕೆಗೆ **23** ಮರಳು ಬ್ಲಾಕ್ ಗಳನ್ನು ಗುರುತಿಸಿದ್ದು, ಟೆಂಡರ್ ಮೂಲಕ ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ.<br>• ಪಟ್ಟಾ ಜಮೀನುಗಳಲ್ಲಿ ಲ್ಯಾಟರೈಟ್ (ಕೆಂಪುಕಲ್ಲು) ಬ್ರಿಕ್ಸ್ ತೆಗೆಯಲು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2025 ರ ನಿಯಮ-3-A(a) ರಂತೆ ಕಾರ್ಯಾದೇಶಗಳನ್ನು ಕೋರಿ 60 ಸಂಖ್ಯೆಯ ಅರ್ಜಿಗಳು ಸ್ವೀಕೃತಗೊಂಡಿವೆ. |
| ಇ) | ಪರವಾನಿಗೆ ಪಡೆದು ಗಣಿಗಾರಿಕೆ ನಡೆಸುತ್ತಿರುವ ಕಂಪನಿಗಳು ಸರ್ಕಾರದ ನೀತಿ ನಿಯಮಾನುಸಾರ ನಡೆದು ಕೊಳ್ಳುತ್ತಿವೆಯೇ ಹಾಗೂ ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುತ್ತಿವೆಯೇ? (ವಿವರ ನೀಡುವುದು) | • ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಮಂಜೂರಾಗಿರುವ ಉಪಖನಿಜ ಗುತ್ತಿಗೆ/ ಲೈಸೆನ್ಸ್ ಪ್ರದೇಶ/ ಕಾರ್ಯಾದೇಶಗಳಿಂದ ಉತ್ಪಾದಿಸುವ ಖನಿಜವನ್ನು ಖನಿಜ ರವಾನೆ ಪರವಾನಗಿಯೊಂದಿಗೆ ಸಾಗಾಣಿಕೆ ಮಾಡಲಾಗುತ್ತಿದೆ.<br>• ಜಿಲ್ಲೆಯಲ್ಲಿ ಅಕ್ರಮ ಉಪಖನಿಜ ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯ ಸದಸ್ಯ ಇಲಾಖೆ ಅಧಿಕಾರಿಗಳು ಗಸ್ತು ಕಾರ್ಯಾಚರಣೆಯನ್ನು ಕೈಗೊಳ್ಳುತ್ತಿದ್ದು, ಅನಧಿಕೃತ ಖನಿಜ ಸಾಗಾಣಿಕೆ ಪ್ರಕರಣಗಳನ್ನು ಪತ್ತೆ ಹಚ್ಚಿ ಸದರಿಯವರ ವಿರುದ್ಧ ಎಂ.ಎಂ. (ಡಿ & ಆರ್) ಕಾಯ್ದೆ -1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮಗಳಂತೆ ಮೊಕದ್ದಮೆ/ ಖಾಸಗಿ ದೂರುಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದೆ.<br>• Mines Act-1952 ರನ್ವಯ ಭಾರತ ಸರ್ಕಾರದ ಕಾರ್ಮಿಕ ಮಂತ್ರಾಲಯದ ಅಧೀನದಲ್ಲಿರುವ **Director General Mines Safety (DGMS)** ಸಂಸ್ಥೆಯಲ್ಲಿ ಕಲ್ಲುಗಣಿಗಳನ್ನು ನೋಂದಾಯಿಸಿದ್ದು, **DGMS** ಸಂಸ್ಥೆಯು ಸದರಿ ಗಣಿ ಗುತ್ತಿಗೆಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಕಲ್ಯಾಣದ ಮೇಲ್ವಿಚಾರಣೆ ಅಧಿಕಾರವನ್ನು ಹೊಂದಿರುತ್ತದೆ. |

ಸಂಖ್ಯೆ: ಸಿಐ-ಎಂಎಂಎನ್/342/2026

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು